ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,

ಬ್ಯಾಡಗಿ.

ಸಿಸಿ. ನಂ.**215/2025**

ದೂರುದಾರರು:

ಕರ್ನಾಟಕ ರಾಜ್ಯ , ಬ್ಯಾಡಗಿ ಪೋಲಿಸ್ ಠಾಣೆ, ಬ್ಯಾಡಗಿ

ವಿರುದ್ಧ

ಆರೋಪಿತ:

ಈಡಿಗ ಅಶೋಕ ಗೌಡ ತಂದೆ ಆಂಜನೇಯಗೌಡ
ವಯಾ: 24 ವರ್ಷ, ಉ: ಮಂತ್ರಿಕಿ, ತಾ: ಅಡೋನಿ ಕರ್ನೂಲ,
ಆಂಧ್ರಪ್ರದೇಶ.

ಆಪಾದನೆಯ ಸಾರಾಂಶ

ಬ್ಯಾಡಗಿ ಪೊಲೀಸ್ ಠಾಣೆಯ ಹದ್ದಿ ಪೈಕಿ ಛತ್ರ-ಮೋಟೆಬೆನ್ನೂರ ಎನ್-ಎಚ್-48 ರಸ್ತೆಯ ಕಚ್ಚಾ ರಸ್ತೆಯ ಮೇಲೆ ದಿನಾಂಕ: 31.12.2024 ರಂದು ಮುಂಜಾನೆ 09.15 ಗಂಟೆಯ ಸುಮಾರಿಗೆ ಆರೋಪಿತನಾದ ನೀವು ನಡೆಸುತ್ತಿದ್ದ ಇಟಿಯಾಸ್ ಜಿಡಿ ಕಾರ ನಂ: KA03/AF-5762 ನೇದ್ದರಲ್ಲಿ ಚಾಸಾ-6 ರಿಂದ 9 ಮತ್ತು ಸಂಕೇತ ಇವರನ್ನು ಕೂಡ್ರಿಸಿಕೊಂಡು ನೀವು ನಡೆಸುತ್ತಿದ್ದ ಕಾರನ್ನು ಛತ್ರ ಕಡೆಯಿಂದ ಮೋಟೆಬೆನ್ನೂರು ಕಡೆಗೆ ಅತೀವೇಗ ವ ನಿರ್ಲಕ್ಷ್ಯತನದಿಂದ, ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಕಾರನ್ನು ಕಂಟ್ರೋಲ್ ಮಾಡಲಾಗದೇ ಎನ್-ಎಚ್-48 ರಸ್ತೆಯಿಂದ ಕಚ್ಚಾ ರಸ್ತೆಗೆ ಇಳಿಸಿ ಕಚ್ಚಾ ರಸ್ತೆಯ ಮೇಲೆ ಪಾರ್ಕಿಂಗ್ ಲೈಟ್ ಹಾಕಿ ನಿಲ್ಲಿಸಿದ ಎರಟಿಗಾ ಕಾರ ನಂ: KA17/MA-1277 ನೇದ್ದರ ಹಿಂದೆ ಡಿಕ್ಕಿ ಹೊಡೆದ ಅಪಘಾತಪಡಿಸಿದ ಅಪರಾಧಕ್ಕಾಗಿ ಬಿ.ಎನ್.ಎಸ್-2023 ಕಾಯಿದೆ ಕಲಂ: 281 ರೀತ್ಯ ದಂಡನೀಯವಾದ ಅಪರಾಧ ವೆಸಗಿರುವುದಾಗಿ ಆಪಾದನೆ ಇದೆ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀವು ನಡೆಸುತ್ತಿದ್ದ ಇಟಿಯಾಸ್ ಜಿಡಿ ಕಾರ ನೇದ್ದರಲ್ಲಿ ಚಾಸಾ-6 ರಿಂದ 9 ಮತ್ತು ಸಂಕೇತ ಇವರನ್ನು ಕೂಡ್ರಿಸಿಕೊಂಡು ನೀವು ನಡೆಸುತ್ತಿದ್ದ ಕಾರನ್ನು ಛತ್ರ ಕಡೆಯಿಂದ ಮೋಟೆಬೆನ್ನೂರು ಕಡೆಗೆ ಅತೀವೇಗವಾಗಿ ನಡೆಸಿಕೊಂಡು ಬಂದು ಕಾರನ್ನು ಕಂಟ್ರೋಲ್ ಮಾಡಲಾಗದೇ ಎನ್-ಎಚ್-48 ರಸ್ತೆಯಿಂದ ಕಚ್ಚಾ ರಸ್ತೆಗೆ ಇಳಿಸಿ ಕಚ್ಚಾ ರಸ್ತೆಯ ಮೇಲೆ ಪಾರ್ಕಿಂಗ್ ಲೈಟ್ ಹಾಕಿ ನಿಲ್ಲಿಸಿದ ಎರಟಿಗಾ ಕಾರ ನಂ: KA17/MA-1277 ನೇದ್ದರ ಹಿಂದೆ ಡಿಕ್ಕಿ ಹೊಡೆದು, ಕಾರಿನಲ್ಲಿದ್ದ ಚಾಸಾ-10 ಮತ್ತು 13 ನೇದವರಿಗೆ ನೇದವರಿಗೆ ಸಾದಾ ಸ್ವರೂಪದ ದುಖಾಪತ್ತಪಡಿಸಿದಲ್ಲದೆ ಎರಡು ವಾಹನಗಳನ್ನು ಜಕಂಗೊಳಿಸಿ ನೀವು ಸಹಾ ದುಖಾಪತ್ತ ಹೊಂದಿದ ಅಪರಾಧಕ್ಕಾಗಿ ಬಿ.ಎನ್.ಎಸ್-2023 ಕಾಯಿದೆ ಕಲಂ:125(ಎ) ರೀತ್ಯ ದಂಡನೀಯವಾದ ಅಪರಾಧ ವೆಸಗಿರುವುದಾಗಿ ಆಪಾದನೆ ಇದೆ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀವು ನಡೆಸುತ್ತಿದ್ದ ಇಟಿಯಾಸ್ ಜಿಡಿ ಕಾರ ನೇದ್ದರಲ್ಲಿ ಚಾಸಾ-6 ರಿಂದ 9 ಮತ್ತು ಸಂಕೇತ ಇವರನ್ನು ಕೂಡ್ರಿಸಿಕೊಂಡು ನೀವು ನಡೆಸುತ್ತಿದ್ದ ಕಾರನ್ನು ಛತ್ರ ಕಡೆಯಿಂದ ಮೋಟೆಬೆನ್ನೂರು ಕಡೆಗೆ ಅತೀವೇಗವಾಗಿ ನಡೆಸಿಕೊಂಡು ಬಂದು ಕಾರನ್ನು ಕಂಟ್ರೋಲ್ ಮಾಡಲಾಗದೇ ಎನ್-ಎಚ್-48 ರಸ್ತೆಯಿಂದ ಕಚ್ಚಾ ರಸ್ತೆಗೆ ಇಳಿಸಿ ಕಚ್ಚಾ ರಸ್ತೆಯ ಮೇಲೆ ಪಾರ್ಕಿಂಗ್ ಲೈಟ್ ಹಾಕಿ ನಿಲ್ಲಿಸಿದ ಎರಟಿಗಾ ಕಾರ ನಂಃ KA17/MA-1277 ನೇದ್ದರ ಹಿಂದೆ ಡಿಕ್ಕಿ ಹೊಡೆದು, ಚಾಸಾ-6 ರಿಂದ 9 ನೇದವರಿಗೆ ಭಾರಿ ಸ್ವರೂಪದ ದುಖಾಪತ್ರಪಡಿಸಿದಲ್ಲದೆ, ನಿಮ್ಮ ಕಾರಿನಲ್ಲಿದ್ದ ಚಾಸಾ-11 ಮತ್ತು 12 ನೇದವರಿಗೆ ಭಾರಿ ಸ್ವರೂಪದ ಗಾಯಪೆಟ್ಟುಪಡಿಸಿದ ಅಪರಾಧಕ್ಕಾಗಿ ಬಿ.ಎನ್.ಎಸ್-2023 ಕಾಯಿದೆ ಕಲಂಃ 125(ಬಿ) ರೀತ್ಯ ದಂಡನೀಯವಾದ ಅಪರಾಧ ವೆಸಗಿರುವುದಾಗಿ ಆಪಾದನೆ ಇದೆ.

ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ವೇಳೆಯಲ್ಲಿ ಆರೋಪಿತನಾದ ನೀವು ನಡೆಸುತ್ತಿದ್ದ ಇಟಿಯಾಸ್ ಜಿಡಿ ಕಾರ ನೇದ್ದರಲ್ಲಿ ಚಾಸಾ-6 ರಿಂದ 9 ಮತ್ತು ಸಂಕೇತ ಇವರನ್ನು ಕೂಡ್ರಿಸಿಕೊಂಡು ನೀವು ನಡೆಸುತ್ತಿದ್ದ ಕಾರನ್ನು ಛತ್ರ ಕಡೆಯಿಂದ ಮೋಟೆಬೆನ್ನೂರು ಕಡೆಗೆ ಅತೀವೇಗವಾಗಿ ನಡೆಸಿಕೊಂಡು ಬಂದು ಕಾರನ್ನು ಕಂಟ್ರೋಲ್ ಮಾಡಲಾಗದೇ ಎನ್-ಎಚ್-48 ರಸ್ತೆಯಿಂದ ಕಚ್ಚಾ ರಸ್ತೆಗೆ ಇಳಿಸಿ ಕಚ್ಚಾ ರಸ್ತೆಯ ಮೇಲೆ ಪಾರ್ಕಿಂಗ್ ಲೈಟ್ ಹಾಕಿ ನಿಲ್ಲಿಸಿದ ಎರಟಿಗಾ ಕಾರ ನೇದ್ದರ ಹಿಂದೆ ಡಿಕ್ಕಿ ಹೊಡೆದು, ನಂತರ ಕಾಂಕ್ರೀಟ್ ಕಾಲುವೆ ಹತ್ತಿರ ನಿಂತುಕೊಂಡು ಮೂತ್ರ ವಿಸರ್ಜನೆ ಮಾಡುತ್ತಿದ್ದ ಮೃತ ಸಂಕೇತ ತಂದೆ ದಯಾನಂದ, ವಯಾಃ 36 ವರ್ಷ, ಸಾಃ ದಾವಣಗೇರಿ ಇವನಿಗೆ ತಲೆಯ ಹಿಂಭಾಗಕ್ಕೆ ಭಾರಿ ಗಾಯ, ಬಲಗೈ ಮೊಣಕೈ ಗಾಯಪಡಿಸಿದ್ದು ಹಾವೇರಿ ಜಿಲ್ಲಾಸ್ಪತ್ರೆಯಿಂದ ಹೆಚ್ಚಿನ ಉಪಚಾರಕ್ಕೆ ದಾವಣಗೇರಿ ಎಸ್.ಎಸ್.ಆಸ್ಪತ್ರೆಯಲ್ಲಿ ಉಪಚಾರಕ್ಕೆ ದಾಖಲಾದಾಗ ಗುಣವಾಗದೆ ದಿನಾಂಕಃ 21.01.2025 ರಂದು ಸಂಜೆ 6-15 ಗಂಟೆಗೆ ಮರಣಪಡಿಸಿದ ಅಪರಾಧಕ್ಕಾಗಿ ಬಿ.ಎನ್.ಎಸ್-2023 ಕಾಯಿದೆ ಕಲಂಃ 106(1) ರೀತ್ಯ ದಂಡನೀಯವಾದ ಅಪರಾಧ ವೆಸಗಿರುವುದಾಗಿ ಆಪಾದನೆ ಇದೆ.

ಪ್ರಶ್ನೆ.1ಃ ಮೇಲಿನ ಅಪರಾಧದ ಬಗೆಗಿನ ವಿವರಣೆ ಕನ್ನಡದಲ್ಲಿ ಓದಿ ಹೇಳಿದ್ದು ನಿಮಗೆ ಅರ್ಥವಾಯಿತಾ?

ಉತ್ತರಃ

ಪ್ರಶ್ನೆ.2ಃ ಸದರೀ ಅಪರಾಧವನ್ನು ನೀವು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೇ

ಉತ್ತರ ಃ

(ಈ ಮೇಲಿನ ಆಪಾದನೆ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿ ಹೇಳಿ ಅವರು ನೀಡಿದ ಉತ್ತರಗಳನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದು ಸದರಿ ದಾಖಲಾತಿಯು ನಿಜವಾದುದು ಹಾಗೂ ಸರಿಯಾದುದು ಎಂದು ದೃಢೀಕರಿಸುತ್ತೇನೆ)

ಸ್ಥಳಃ ಬ್ಯಾಡಗಿ

Sd/-

ದಿನಾಂಕಃ 02.06.2026

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,

ಬ್ಯಾಡಗಿ.